ನಾರಾಯಣಪುರ ಗ್ರಾಮದಲ್ಲಿ ಪರಿಶಿಷ್ಟಜಾತಿ ಪರಿಶಿಷ್ಟ ಪಂಗಡದ ವಸತಿ ನಿಲಯ

2068 (2471) : ಶ್ರೀ ರಾಜಾ ವೆಂಕಟಪ್ಪ ನಾಯಕ್ (ಪೂರಾಪುರ್) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ನಾರಾಯಣಪುರ ಗ್ರಾಮದಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ವಸತಿ ನಿಲಯ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

(ಆ) ಹಾಗಿದ್ದಲ್ಲಿ, ಈ ಗ್ರಾಮದಲ್ಲಿ ವಸತಿ ನಿಲಯ ಎಂದು ಪ್ರಾರಂಭಿಸುವುದು?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :

(ಅ) ಹೌದು.

(ಆ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಸತಿ ನಿಲಯ ಸ್ಥಾಪಿಸುವ ಬಗ್ಗೆ ಜಿಲ್ಲೆಯಿಂದ ಪ್ರಸ್ತಾವನೆ ಬಂದರೆ, ಪರಿಶೀಲಿಸಿ, ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ರಾಜ್ಯದಲ್ಲಿ ಕೈಮಗ್ಗಗಳಿಂದ ನಿರ್ಮಿಸಲ್ಪಡುವ ಬಟ್ಟೆಗಳನ್ನು ಜನಪ್ರಿಯಗೊಳಿಸುವುದು

2069 (2461) : ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ರಾಜ್ಯದಲ್ಲಿ ಕೈಮಗ್ಗದಿಂದ ನಿರ್ಮಿಸಲ್ಪಡುವ ಬಟ್ಟೆಗಳನ್ನು ಮಾರಾಟ ಮಾಡುವ ನೇಕಾರರ ಸಹಕಾರಿ ಸಂಘಗಳು ಎಷ್ಟು? ಅವು ಯಾವುವು?

(ಆ) ಈ ನೇಕಾರರ ಸಹಕಾರಿ ಸಂಘಗಳಿಂದ ಮಾರಾಟವಾಗುವ ಬಟ್ಟೆಗಳನ್ನು ಜನಪ್ರಿಯಗೊಳಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

(ಇ) 1998-99, 1999-2000ನೇ ಸಾಲಿನಲ್ಲಿ ಈ ನೇಕಾರರ ಸಹಕಾರಿ ಸಂಘಗಳಿಗೆ ಸರ್ಕಾರ ನೀಡಿದ ಸಹಾಯಧನ ಎಷ್ಟು?

(ಈ) ಸಹಾಯಧನ ಪಾವತಿಗೆ ವಿಳಂಬವಾಗಲು ಕಾರಣಗಳೇನು?

ಶ್ರೀ ಎಂ. ಮಹದೇವ್ (ಜವಳಿ ಮತ್ತು ರೇಷ್ಮೆ ಸಚಿವರು) :

(ಅ) ರಾಜ್ಯದಲ್ಲಿ 290 ಕೈಮಗ್ಗ ನೇಕಾರ ಸಹಕಾರ ಸಂಘಗಳು ಕೈಮಗ್ಗದಿಂದ ಉತ್ಪಾದಿಸುವ ಬಟ್ಟೆಗಳನ್ನು ಮಾರಾಟ ಮಾಡುತ್ತಿವೆ.

ಜಿಲ್ಲಾವಾರು ವಿವರ ಅನುಬಂಧ ಲಗತ್ತಿಸಿದೆ.

(ಆ) ಸಹಕಾರ ಸಂಘಗಳು ಉತ್ಪಾದಿಸಿದ ಬಟ್ಟೆಗಳನ್ನು ಮಾರಾಟ ಮಾಡುವ ಸಲುವಾಗಿ ಸರ್ಕಾರದ ವತಿಯಿಂದ ಪ್ರತಿ ವರ್ಷ ರಾಜ್ಯ ಮಟ್ಟದಲ್ಲಿ ವಸ್ತು ಪ್ರದರ್ಶನ ಮತ್ತು ಮಾರಾಟವನ್ನು ಏರ್ಪಾಡು ಮಾಡಲಾಗುತ್ತಿದೆ. ಹಾಗೂ ಸದರಿ ಉತ್ಪನ್ನಗಳ ಮಾರಾಟದ ಸಲುವಾಗಿ 1999-2000ನೇ ಸಾಲಿನವರೆಗೆ ಕೇಂದ್ರ ಪುರಸ್ಕೃತ ಮಾರುಕಟ್ಟೆ ಅಭಿವೃದ್ಧಿ ಸಹಾಯಧನ ಯೋಜನೆಯ ಕೈಮಗ್ಗನೇಕಾರ ಸಹಕಾರ ಸಂಘಗಳು ಉತ್ಪಾದಿಸಿದ ಬಟ್ಟೆಗಳನ್ನು ಮಾರಾಟ ಮಾಡಲು ಅನುಕೂಲ ಮಾಡಿಕೊಡಲಾಗಿದೆ.

(ಇ) 1998-99ನೇ ಸಾಲಿಗೆ 42 ಸಹಕಾರ ಸಂಘಗಳಿಗೆ ಹಾಗೂ ಕಾವೇರಿ ಹ್ಯಾಂಡ್‌ಲೂಮ್ಸ್ (ಅಪೆಕ್ಸ್ ಸೊಸೈಟಿ) ರೂ. 61,00,370.00 ಗಳ ರಾಜ್ಯದ ಪಾಲಿನ ಮಾರುಕಟ್ಟೆ ಅಭಿವೃದ್ಧಿ ಸಹಾಯಧನ ಮಂಜೂರು ಮಾಡಿ ಬಿಡುಗಡೆ ಮಾಡಲಾಗಿದೆ. ಸದರಿ ಸಾಲಿನ ಕೇಂದ್ರದ ಪಾಲು ಮೊದಲನೇ ಕಂತಿನ ಕೇಂದ್ರ ಸರ್ಕಾರದಿಂದ ರೂ. 29,23,392-00 ದಿನಾಂಕ: 21-1-2000 ರಾಜ್ಯ ಸರ್ಕಾರಕ್ಕೆ ಬಿಡುಗಡೆ ಮಾಡಿದ್ದು, ಅದು ದಿನಾಂಕ: 25-3-2000ರಂದು ರಾಜ್ಯ ಸರ್ಕಾರಕ್ಕೆ ಜಮಾ ಆಗಿರುತ್ತದೆ. ಹಣ ಬಿಡುಗಡೆ ಮಾಡುವ ಸಲುವಾಗಿ ರಾಜ್ಯ ಹುಜೂರ್ ಖಜಾನೆಗೆ ಹಣ ಸ್ವೀಕೃತಿ ರಸೀದಿ ಕಳುಹಿಸಿದ್ದು, ಹಣ ಬಿಡುಗಡೆಗೆ ಕ್ರಮ ತೆಗೆದುಕೊಳ್ಳಲಾಗುವುದು.

1999-2000ನೇ ಸಾಲಿಗೆ 43 ಸಹಕಾರ ಸಂಘಗಳಿಗೆ ರೂ. 55,23,578-00 ಗಳ ರಾಜ್ಯದ ಪಾಲಿನ ಮಾರುಕಟ್ಟೆ ಅಭಿವೃದ್ಧಿ ಸಹಾಯಧನ ಮಂಜೂರು ಮಾಡಿದ್ದು, ಕೇಂದ್ರ ಸರ್ಕಾರದ ಮಂಜೂರಾತಿಗೆ ರೂ. 55,23,578-00 ಗಳನ್ನು ಈಗಾಗಲೇ ಶಿಫಾರಸ್ಸು ಮಾಡಲಾಗಿದೆ. ಕೇಂದ್ರ ಸರ್ಕಾರದಿಂದ ಇನ್ನೂ ಮಂಜೂರಾತಿ ನೀಡಬೇಕಾಗಿದೆ. ಕೇಂದ್ರ ಸರ್ಕಾರ ಮಂಜೂರಾತಿ ನೀಡಿ ಹಣ ಬಿಡುಗಡೆಯಾದ ನಂತರ ರಾಜ್ಯದ ಹಾಗೂ ಕೇಂದ್ರದ ಪಾಲಿನ ಹಣ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುವುದು.

(ಈ) ಮಾರುಕಟ್ಟೆ ಅಭಿವೃದ್ಧಿ ಸಹಾಯಧನ ಯೋಜನೆಯು ಪುರಸ್ಕೃತ ಯೋಜನೆಯಾಗಿದ್ದು, ಕೇಂದ್ರ ಸರ್ಕಾರದ ಪತ್ರ ದಿ:21-12-1998ರ ಪ್ರಕಾರ ಈ ಯೋಜನೆಯನ್ನು 31-3-2000ರವರೆಗೆ ಮಾತ್ರ ಮುಂದುವರಿಸಿದ್ದು, ಮಾರುಕಟ್ಟೆ ಅಭಿವೃದ್ಧಿ ಸಹಾಯಧನವನ್ನು ಈ ಕೆಳಗಿನ ಅಂಶಗಳಂತೆ ಮಾಡಲು ಕೇಂದ್ರ ಸರ್ಕಾರವು ಮಾರ್ಗಸೂಚಿಯನ್ನು ರೂಪಿಸಿದೆ.

1998-99ನೇ ಸಾಲಿನಲ್ಲಿ:

1. ಶೇಕಡ 50 ರಷ್ಟು ರಿಬೇಟ್‌ಗಾಗಿ
2. ಶೇಕಡ 20 ರಷ್ಟು ಮಾರಾಟ ಮಳಿಗೆ ಖರೀದಿ:ನವೀಕರಣ.
3. ಶೇಕಡ 20 ರಷ್ಟು ವಸ್ತುಪ್ರದರ್ಶನ ಏರ್ಪಡಿಸಲು:ಭಾಗವಹಿಸಲು ಸಾಗಾಣಿಕಾ ವೆಚ್ಚ.
4. ಶೇಕಡ 16ರಷ್ಟು ಕಂಪ್ಯೂಟರ್ ವಿನ್ಯಾಸ ಕೇಂದ್ರ ತೆರೆಯಲು:ನುರಿತ ಡಿಸೈನ್‌ರನ್ನು ಅಳವಡಿಸಲು.

1999–2000ನೇ ಸಾಲಿನಲ್ಲಿ

1. ಶೇಕಡ 25 ರಷ್ಟು ರಿಬೇಟ್‌ಗಾಗಿ
2. ಶೇಕಡ 30 ರಷ್ಟು ಮಾರಾಟ ಮಳಿಗೆ ಖರೀದಿ:ನವೀಕರಣ.
3. ಶೇಕಡ 30 ರಷ್ಟು ವಸ್ತು ಪ್ರದರ್ಶನ ಏರ್ಪಡಿಸಲು:ಭಾಗವಹಿಸಲು ಸಾಗಾಣಿಕಾ ವೆಚ್ಚ
4. ಶೇಕಡ 15ರಷ್ಟು ಕಂಪ್ಯೂಟರ್ ವಿನ್ಯಾಸ ಕೇಂದ್ರ ತೆರೆಯಲು:ನುರಿತ ಡಿಸೈನ್‌ಅನ್ನು ಅಳವಡಿಸಲು.

ಈ ಅಂಶಗಳಿಗಾಗಿ ಉಪಯೋಗಿಸಬೇಕೆಂಬ ಕರಾರಿನೊಂದಿಗೆ ಈ ಯೋಜನೆಯನ್ನು ಮುಂದುವರಿಸಲಾಗಿರುತ್ತದೆ. ಈ ಮೇಲೆ ತಿಳಿಸಿದ ಅಂಶಗಳಿಗೆ ಹಣ ಖರ್ಚು ಮಾಡಿ ಹಣ ಉಪಯೋಗ ಪ್ರಮಾಣ ಪತ್ರವನ್ನು ಸಲ್ಲಿಸಲು ಕೈಮಗ್ಗ ನೇಕಾರ ಸಹಕಾರ ಸಂಘಗಳು ಸಲ್ಲಿಸದಿರುವ ಪ್ರಯುಕ್ತ ಕೇಂದ್ರ ಸರ್ಕಾರವು ಮಂಜೂರು ಮಾಡಿರುವುದಿಲ್ಲ.

ಅನುಬಂಧ

ಕರ್ನಾಟಕ ರಾಜ್ಯದಲ್ಲಿ ಕೆಲಸ ಮಾಡುತ್ತಿರುವ ಕೈಮಗ್ಗ ನೇಕಾರ ಸಹಕಾರ ಸಂಘಗಳ ಜಿಲ್ಲಾವಾರು ವಿವರಗಳ ಪಟ್ಟಿ.

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಕೆಲಸ ನಿರ್ವಹಿಸುತ್ತಿರುವ ಕೈಮಗ್ಗ ಸಹಕಾರ ಸಂಘಗಳ ಸಂಖ್ಯೆ
1.	ಬೆಂಗಳೂರು (ಗ್ರಾಮ)	11
2.	ಬೆಂಗಳೂರು (ನಗರ)	25
3.	ಬೆಳಗಾಂ	42
4.	ಬಳ್ಳಾರಿ	17
5.	ಬೀದರ್	11
6.	ಬಿಜಾಪುರ	38
7.	ಬಾಗಲಕೋಟೆ	
8.	ಚಿಕ್ಕಮಗಳೂರು	4
9.	ಚಿತ್ರದುರ್ಗ	44
10.	ದಾವಣಗೆರೆ	
11.	ದಕ್ಷಿಣ ಕನ್ನಡ	8
12.	ಉಡುಪಿ	
13.	ಧಾರವಾಡ	18

1	2		3
14.	ಹಾವೇರಿ		18
15.	ಗದಗ್		
16.	ಗುಲ್ಬರ್ಗಾ		12
17.	ಹಾಸನ		5
18.	ಕೋಲಾರ		12
19.	ಕೊಡಗು		-
20.	ಮಂಡ್ಯ		6
21.	ಮೈಸೂರು		9
22.	ಚಾಮರಾಜನಗರ		
23.	ರಾಯಚೂರು		5
24.	ಕೊಪ್ಪಳ		
25.	ಶಿವಮೊಗ್ಗ		8
26.	ತುಮಕೂರು		16
27.	ಉತ್ತರ ಕನ್ನಡ		1
		ಒಟ್ಟು	290

ರಾಜ್ಯದಲ್ಲಿ ವಿವಿಧ ಜಿಲ್ಲೆಗಳಲ್ಲಿ ನೀಡಲಾದ ಗ್ರಾನೈಟ್ ಪರವಾನಿಗೆ

2070 (2462) : ಶ್ರೀ ಸಭಾಪತಿ ಯು.ಆರ್. (ಉಡುಪಿ) : ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ರಾಜ್ಯದಲ್ಲಿ ವಿವಿಧ ಜಿಲ್ಲೆಗಳಲ್ಲಿ ನೀಡಲಾದ ಗ್ರಾನೈಟ್ ಪರವಾನಿಗೆ ಎಷ್ಟು? (ವಿವರನೀಡಿ)

(ಆ) ರಾಜ್ಯದಾದ್ಯಂತ ನವ ಮಂಗಳೂರು ಬಂದರಿನ ಮೂಲಕ ಗ್ರಾನೈಟ್ ಕಳ್ಳಸಾಗಾಟ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

(ಇ) 1998-99, 1999-2000ನೇ ಸಾಲಿನಲ್ಲಿ ಈ ಬಗ್ಗೆ ಎಷ್ಟು ಪ್ರಕರಣಗಳನ್ನು ಪತ್ತೆ ಹಚ್ಚಿ ವಾಹನಗಳ ಮುಟ್ಟುಗೋಲು ಹಾಕಿ ಮೊಕದ್ದಮೆಗಳನ್ನು ಹೂಡಿ ಎಷ್ಟು ಜನರನ್ನು ಬಂದಿಸಲಾಗಿದೆ? (ವಿವರ ನೀಡಿ)